# ಜಲಮೂಲ ಇಲ್ಲದ ಮನುಷ್ಯನ ಬದುಕು ಕಠಿಣ: ಹೆಬ್ಳೀಕರ

ಶಿರಸಿ: 'ಕೆರೆಗಳು ಕೇವಲ ನೀರಿನ ಕೇಂದ್ರಗಳಲ್ಲ. ಅವು ಸಾಮಾಜಿಕ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಕೆರೆ ಮತ್ತು ಮನುಷ್ಯನ ಬದುಕಿನ ನಡುವೆ ಅವಿಭಾವ ಸಂಬಂಧ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆರೆಗಳು ನಾಶವಾಗುತ್ತಿದ್ದು, ಮನುಷ್ಯನ ಬದುಕು ಕಠಿಣವಾಗುತ್ತಿದೆ' ಎಂದು ಪರಿಸರವಾದಿ ಸುರೇಶ ಹೆಬ್ಳೀಕರ ಹೇಳಿದರು.

ಕೆರೆ ಸಮ್ಮೇಳನದ ಅಂಗವಾಗಿ ಎರಡನೇ ದಿನ ಶುಕ್ರವಾರ ಇಲ್ಲಿನ ಲಯನ್ಸ್ ಸಭಾಭವನದಲ್ಲಿ ನಡೆದ ಮಕ್ಕಳ ದಿನಾಚರಣೆ ಹಾಗೂ ವಿವಿಧ ಗೋಷ್ಠಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕೆರೆ ದಂಡೆಯ ಮೇಲೆ ನಾಟಕ, ಸಂಗೀತ ಕಾರ್ಯಕ್ರಮಗಳು ಮೊದಲು ನಡೆಯುತ್ತಿದ್ದವು. ಈಗ ಅವು ಮಾಯವಾಗುತ್ತಿವೆ. ಧಾರವಾಡ ಸುತ್ತಲಿನ ಪ್ರದೇಶದಲ್ಲಿ ಸುಮಾರು 1ಸಾವಿರ ಕೆರೆಗಳು ಇದ್ದವು. ಅವುಗಳಲ್ಲಿ ಅನೇಕ ಕೆರೆಗಳು ಇಂದು ಮಾಯವಾಗಿವೆ' ಎಂದು ವಿಷಾದಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ, ವಿಜ್ಞಾನಿ ಸುಭಾಷ ಚಂದ್ರನ್, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಅಶೀಸರ, ಪ್ರೊ. ಬಿ.ಎಂ. ಕುಮಾರಸ್ವಾಮಿ, ಡಿಡಿಪಿಐ ಎಂ.ಎಸ್. ಪ್ರಸನ್ನಕುಮಾರ, ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರಭಾಕರ ಹೆಗಡೆ, ಲಯನ್ಸ್ ಸಂಸ್ಥೆಯ ತ್ರಿವಿಕ್ರಮ ಪಟವರ್ಧನ ಉಪಸ್ಥಿತರಿದ್ದರು. ವಿವಿಧ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಕೆರೆಗಳ ಕುರಿತು ನಡೆಸಿದ ಅಧ್ಯಯನ ವರದಿ ಮಂಡಿಸಿದರು.

**ಜಲ ಸಂರಕ್ಷಣೆ ಮಾಡಿ:** ಗುರುವಾರ ಸ್ವರ್ಣವಲ್ಲಿ ಮಠದಲ್ಲಿ ನಡೆದ ಕೆರೆಗಳ ವೈಶಿಷ್ಟ್ಯತೆ, ಅದರ ಸಂರಕ್ಷಣೆ, ಪಾರಂಪರಿಕ ವಿಧಾನಗಳು ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಪ್ರಕಾಶ ಭಟ್ಟ ಧಾರವಾಡ ಅವರು 'ಜಲ ಎನ್ನುವುದು ಒಂದು ಚಕ್ರ. 300 ಕೋಟಿ ವರ್ಷಗಳ ಹಿಂದೆ ಇದ್ದಷ್ಟೇ ನೀರು ಇಂದು ಸಹ ಇದೆ. ಆದರೆ ಮಾನವನ ಬಳಕೆಗೆ ಸಿಗುವುದು ಕಡಿಮೆಯಾಗುತ್ತಿದೆ ಎಂದರು

ನೀರನ್ನು ಸಂರಕ್ಷಣೆ ಮಾಡದಿದ್ದರೆ ಬದುಕು ಕಷ್ಟವಾಗುತ್ತದೆ. ಕಷ್ಟವಾಗಿದ್ದ ಬದುಕನ್ನು ಹಸನು ಮಾಡಿಕೊಂಡ ಉದಾಹರಣೆಗಳಿವೆ. ನೀರನ್ನು ಇಂಗಿಸುವುದು, ಗಿಡ ಮರಗಳನ್ನು ನೆಟ್ಟು ಬೆಳೆಸುವುದರಿಂದ ಬಂಜರು ಭೂಮಿಯಲ್ಲಿ ಕೃಷಿ ನಡೆಸಿ ಬದುಕನ್ನು ಕಟ್ಟಿಕೊಂಡ ಉದಾಹರಣೆಗಳು ನಮಗೆ ಮಾದರಿಯಾಗಬೇಕು' ಎಂದು ಅವರು ಸಲಹೆ ನೀಡಿದರು.

ಪರಿಸರ ವರ್ಧಿನಿ ಸಂಘಟನೆಯ ರಮೇಶ ಹೆಗಡೆ ಅವರು 'ಕೆರೆಗಳು ಅಂತರ್ಜಲವನ್ನು ಹೆಚ್ಚಿಸುತ್ತವೆ. ಅನೇಕ ಜೀವಿಗಳಿಗೆ ಆಶ್ರಯ ತಾಣಗಳಾಗಿವೆ. ಅನೇಕ ಆಹಾರ ತಳಿಗಳಿಗೆ ಉಗಮ ಸ್ಥಾನವೂ ಆಗಿವೆ. ಕೆರೆಗಳ ವಿನಾಶದಿಂದ ಇವೆಲ್ಲ ಸಂಗತಿಗಳು ನಾಶವಾಗುತ್ತವೆ' ಎಂದರು. ಸೊರಬದ ಶ್ರೀಪಾದ ಬಿಚ್ಚುಗತ್ತಿ ಅವರು 'ಸೊರಬ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕೆರೆಗಳಿವೆ. ಕಾನು ಅರಣ್ಯ ಸಂರಕ್ಷಣೆಯ ಮೂಲಕ ಅನೇಕ ಕೆರೆಗಳ ಸಂರಕ್ಷಣೆ ಮಾಡಲಾಗಿದೆ' ಎಂದರು.

ಬನವಾಸಿಯ ರಘುನಂದನ ಭಟ್ಟ ಮಾತನಾಡಿ 'ಕದಂಬರ ನೆಲದಲ್ಲಿರುವ ಕೆರೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆಹಾರದ ಕೇಂದ್ರ, ಔಷಧ ಗಿಡಮೂಲಿಕೆಗಳ ಮೂಲವಾಗಿದ್ದ ಕೆರೆಗಳು ಗ್ರಾಮೀಣ ಬದುಕನ್ನು ಶ್ರೀಮಂತಗೊಳಿಸಿದ್ದವು. ಇಂದು ಅನೇಕ ಕೆರೆಗಳು ಅತಿಕ್ರಮಣಕ್ಕೆ ಬಲಿಯಾಗಿವೆ' ಎಂದರು. ಬಿ.ಎಚ್. ರಾಘವೇಂದ್ರ ಸಾಗರ, ಕೆ. ವೆಂಕಟೇಶ ಅಭಿಪ್ರಾಯ ಮಂಡಿಸಿದರು.